**ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಿ ಪ್ರಮಾಣೀಕರಿಸಿದ ದಿಃ 24.07.2026**

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಕೆ ಸಿ ಎಸ್ ವಕೀಲರಿಂದ**

1. ದಿಃ 26.08.2023 ರಂದು ನಾನು ಕರ್ತವ್ಯಕ್ಕೆ ಹಾಜರಿದ್ದೆ ಎಂದು ತೋರಿಸಲು ಕರ್ತವ್ಯ ಹಾಜರಾತಿ ಪತ್ರವನ್ನು ಹಾಜರುಪಡಿಸಿರುತ್ತೇನೆ. ದಿಃ 26.08.2023 ರಂದು ಆದ ಘಟನೆ ಬಗ್ಗೆ ಠಾಣ ದಿನಚರಿಯಲ್ಲಿ ನಮೂದು ಮಾಡಿರುತ್ತೇನೆ. ಸದರಿ ವಿಚಾರವನ್ನು ಠಾಣಾ ದಿನಚರಿಯಲ್ಲಿ ಮರು ದಿನ ನಮೂದು ಮಾಡಿರುತ್ತೇವೆ. ದಿಃ 26.08.2023 ರಂದು ರಾತ್ರಿ 12.00 ಗಂಟೆಗೆ ನಾವು ನಮ್ಮ ಠಾಣಾ ದಿನಚರಿಯನ್ನು ಕ್ಲೊಸ್ ಮಾಡಿರುತ್ತೇವೆ. ದಿಃ 26.08.2023 ರಾತ್ರಿ 12.00 ಗಂಟೆ ಸಮಯದ ಒಳಗಡೆ ಠಾಣಾ ದಿನಚರಿಯಲ್ಲಿ ನಡೆದ ಘಟನೆಯ ಬಗ್ಗೆ ನಮೂದು ಆಗಿರುವುದಿಲ್ಲ.

2. ಮರು ದಿನ ಎಷ್ಟು ಗಂಟೆಗೆ ಠಾಣಾ ದಿನಚರಿಯಲ್ಲಿ ಘಟನೆಯ ಬಗ್ಗೆ ನಮೂದು ಮಾಡಿರುತ್ತೇನೆ ಎಂದು ನೆನಪಿಲ್ಲ. ನಾವು ಠಾಣೆಯಲ್ಲಿದ್ದರೆ ಮಾಹಿತಿ ಬಂದ ಕೂಡಲೆ ಠಾಣಾ ದಿನಚರಿಯಲ್ಲಿ ನಮೂದು ಮಾಡಿರುತ್ತೇವೆ ಇಲ್ಲದಿದ್ದರೆ ನಂತರ ಠಾಣಾ ದಿನಚರಿಯಲ್ಲಿ ನಮೂದು ಮಾಡುತ್ತೇವೆ . ಇನ್ನೊಂದು ಠಾಣೆಗೆ ಹೋಗಿ ದೂರು ನೀಡಬೇಕಾದರೆ ನಮೂದು ಮಾಡಬೇಕಾದರೆ ನಮ್ಮ ಠಾಣಾ ದಿನಚರಿಯಲ್ಲಿ ನಮೂದು ಮಾಡಬೇಕು ಎಂದರೆ ಸರಿಯಲ್ಲ . ಆ ರೀತಿ ಬೇರೆ ಠಾಣೆಗೆ ಹೋಗಿ ವಿಚಾರದ ಬಗ್ಗೆ ಠಾಣಾ ದಿನಚರಿಯಲ್ಲಿ ನಮೂದು ಮಾಡಬೇಕಾದ್ದಲ್ಲಿ ನಮ್ಮ ಠಾಣಾ ದಿನಚರಿಯಲ್ಲೂ ನಮೂದು ಮಾಡಬೇಕಾಗುತ್ತದೆ ಎಂದರೆ ಸಾಕ್ಷಿಯು ಕಡ್ಡಾಯ ಇರುವುದಿಲ್ಲ ಎಂದು

ನುಡಿದರು. ಠಾಣಾ ದಿನಚರಿ ಪುಸ್ತಕ ಇರುವುದೆ ಈ ರೀತಿ ಘಟನೆಯನ್ನು ನಮೂದು ಮಾಡುವುದಕ್ಕೆ ಎಂದರೆ ಸಾಕ್ಷಿಯು ಸಂಧರ್ಭಾನುಸಾರ ಮಾಡುತ್ತೇವೆ ಎಂದು ನುಡಿದರು.

3. ಘಟನಾ ಸ್ಥಳಕ್ಕೆ ನಾವು 6 ಜನ ಸಿಬ್ಬಂದಿಗಳು ಹೋಗಿರುತ್ತೇವೆ . 6 ಜನ ಘಟನ ಸ್ಥಳಕ್ಕೆ ಹೋಗಲು ನೇಮಕ ಮಾಡಿದ ಬಗ್ಗೆ ನಮ್ಮ ಠಾಣಾ ದಿನಚರಿಯಲ್ಲಿ ನಮೂದು ಇರುತ್ತದೆ. ಕೃತ್ಯ ಸ್ಥಳ ಕುಶಾಲನಗರ ಮೈಸೂರು ರಾಷ್ಟ್ರೀಯ ಹೆದ್ದಾರಿ ಎಂದರೆ ಸರಿ . ನಾವು ವಾಹನ ದಟ್ಟಣೆ ಇರುವ ಸ್ಥಳದಲ್ಲಿ ಹಾಗೂ ಇಲ್ಲದೆ ಇರುವ ಸ್ಥಳದಲ್ಲೂ ವಾಹನವನ್ನು ಪರಿಶೀಲನೆ ಮಾಡಬಹುದು. ವಾಹನ ದಟ್ಟಣೆ ಇರುವ ಸ್ಥಳದಲ್ಲಿ ವಾಹನ ಪರಿಶೀಲನೆ ಮಾಡುವ ಆಗಿಲ್ಲ ಎಂದರೆ ಸ ರಿಯಲ್ಲ. ಕೃತ್ಯ ನಡೆದ ದಿನ ವಾಹನ ಸಂಚಾರ ಸರಳವಾಗಿತ್ತು . ಕೃತ್ಯ ಸ್ಥಳವಾದ ಕೊಪ್ಪ ಚೆಕ್ ಪೋಸ್ಟ ಬಳಿ ಠಾಣೆಯ ಸಿಸಿಟಿವಿ ಕ್ಯಾಮೇರಾ ಇರುವುದಿಲ್ಲ ಅರಣ್ಯ ಇಲಾಖೆಯವರ ಸಿಸಿಟಿವಿ ಕ್ಯಾಮೇರಾ ಇರುತ್ತದೆ . ಚೆಕ್ ಪೊಸ್ಟ ಬಳಿ ಅಳವಡಿಸಿರುವ ಸಿಸಿಟಿವಿ ಕ್ಯಾಮೇರಾ ದಲ್ಲಿ ಕೃತ್ಯ ಸ್ಥಳ ಸೆರೆಯಾಗುತ್ತದೆ .

4. ನಾನು ದೂರು ಕೊಡುವ ಸಂದರ್ಭಕ್ಕೆ ಸಿಸಿಟಿವಿ ಫೂಟೇಜ್ ಇರುವ ಬಗ್ಗೆ ತಿಳಿಸಿರುವುದಿಲ್ಲ. ನಮ್ಮ ಇಲಾಖೆಯವರಿಗೂ ಕೃತ್ಯ ಸ್ಥಳದಲ್ಲಿ ಸಿಸಿಟಿವಿ ಕ್ಯಾಮೇರಾ ಇರುವುದು ತಿಳಿದಿದೆ ಎಂದರೆ ಸರಿ . ನಾನು ಮುಖ್ಯ ವಿಚಾರಣೆಯಲ್ಲಿ ತಿಳಿಸಿದ ಘಟನೆ ನಡೆದಿದೆ ಆದಲ್ಲಿ ಸಿಸಿಟಿವಿ ಕ್ಯಾಮೇರಾ ಪರಿಶೀಲನೆ ಮಾಡಿದರೆ ಎಲ್ಲಾ ಸತ್ಯ ಹೊರಬರುತ್ತದೆ ಎಂದರೆ ಸರಿ . ಸದರಿ ಪ್ರಕರಣದಲ್ಲಿ ಸಿಸಿಟಿವಿ ಕ್ಯಾಮೇರಾ ಪರಿಶೀಲನೆ ಮಾಡಿದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಘಟನಾ ನಡೆಯುವ ಸಮಯದಲ್ಲಿ ಘಟನೆ ಸ್ಥಳದಲ್ಲಿ ಸುಮಾರು

ಅರ್ಧ ಗಂಟೆ ಇದ್ದೆ . ಆ ಸಮಯದಲ್ಲಿ ಎಷ್ಟು ವಾಹನ ಪರಿಶೀಲನೆ ಮಾಡಿ ಮದ್ಯಪಾನ ಸೇವನೆ ಮಾಡಿರುತ್ತಾರೆ ಎಂದು ತಿಳಿದು ಬಂದಿರುತ್ತದೆ ಎಂದರೆ ಸಾಕ್ಷಿಯು ನೆನಪಿಲ್ಲ ಎಂದು ನುಡಿದರು.

5. ಘಟನೆ ನಡೆದ ದಿನ ಮದ್ಯಪಾನ ಸೇವನೆ ಮಾಡಿ ಗಾಡಿ ಚಾಲನೆ ಮಾಡಿರುವವರನ್ನು ಹಿಡಿದ ಬಗ್ಗೆ ಯಾವುದಾದರೂ ಮಾಹಿತಿ ನೀಡಿದ್ದಿರಾ ಎಂದರೆ ಸಾಕ್ಷಿಯು ಘಟನೆ ದಿನದಂದು ಯಾವುದೆ ಡ್ರಿಂಕ್ ಆ್ಯಂಡ್ ಡ್ರೈವ್ ಪ್ರಕರಣ ನಮೂದು ಆಗಿರುವುದಿಲ್ಲ ಎಂದು ನುಡಿದರು. ಡ್ರಿಂಕ್ ಆ್ಯಂಡ್ ಡ್ರೈವ್ ಪ್ರಕರಣ ಪರಿಶೀಲನೆ ಮಾಡುವ ಸಂದರ್ಭಕ್ಕೆ ನಾವು ಹಿಡನ್ ಕ್ಯಾಮೇರಾ ಧರಿಸಿರುವುದಿಲ್ಲ. ಡ್ರಿಂಕ್ ಆ್ಯಂಡ್ ಡ್ರೈವ್ ಪ್ರಕರಣದಲ್ಲಿ ಪರಿಶೀಲನೆ ಮಾಡಬೇಕಾದರೆ ಮತ್ತು ಯಾವುದೆ ರೀತಿ ವಾಹನ ಪರಿಶೀಲನೆ ಮಾಡಬೇಕಾದರೆ ಕಡ್ಡಾಯವಾಗಿ ಹಿಡನ್ ಕ್ಯಾಮೇರಾ ಧರಿಸಬೇಕು ಎಂದರೆ ಸರಿ . ಘಟನೆ ದಿನದಂದು ಪರಿಶಿಲನೆಯ ಸಮಯದಲ್ಲಿ ನನ್ನ ಕೈಯಲ್ಲಿ ಬ್ಯಾಟನ್ ಮತ್ತು ಡಿಡಿ ಮಿಷನ್ ಇರುತ್ತದೆ. ನಮ್ಮ ಸಿಬ್ಬಂದಿಯವರ ಬಳಿಯೂ ಸದರಿ ಉಪಕರಣಗಳು ಇರುತ್ತದೆ .

6. ಚಾಲಕನು ಬರುತ್ತಿರುವ ಸಮಯದಲ್ಲಿ ಅವನನ್ನು ತಡೆಯಲು ಬ್ಯಾಟನ್ ಮತ್ತು ಕೈ ಸನ್ನೆ ಎರಡನ್ನೂ ಮಾಡಿರುತ್ತೇವೆ. ನಾನು ಕೊಟ್ಟ ದೂರನ್ನು ಪರಿಶೀಲನೆ ಮಾಡಿರುತ್ತೇನೆ. ನಮ್ಮ ದೂರಿನಲ್ಲಿ ಮತ್ತು ಮಹಜರನಲ್ಲಿ ಬ್ಯಾಟನ್ ಹಿಡಿದು ಸಿಗ್ನಲ್ ಕೊಟ್ಟಿರುವ ಬಗ್ಗೆ ನಮೂದು ಮಾಡಿರುವುದಿಲ್ಲ ಎಂದರೆ ಸರಿ . ನಮ್ಮ ದೂರಿನಲ್ಲಿ ಮತ್ತು ಮಹಜರನಲ್ಲಿ ನಾವು ಕೈ ಸನ್ನೆ ಮಾಡಿರುವ ಬಗ್ಗೆ ಮಾತ್ರ ಇರುತ್ತದೆ ಎಂದರೆ ಸರಿ . ನಮ್ಮ ದೂರಿನಲ್ಲಿ

ಬ್ಯಾಟನ್ ನಿಂದ ಸನ್ನೆ ಮಾಡಿರುವ ಬಗ್ಗೆ ನಮೂದು ಮಾಡಲು ಯಾವುದೆ ತೊಂದರೆ ಇರಲಿಲ್ಲ ಎಂದರೆ ಸರಿ . ನಾವು ಮುಸ್ಸಂಜೆ ಹೊತ್ತಿನಲ್ಲಿ ಬ್ಯಾಟನ್ ಬಳಸಿ ಸನ್ನೆ ಮಾಡಬೇಕು ಎಂದರೆ ಸರಿ . ನಮ್ಮ ಸಿಬ್ಬಂದಿಗಳು ಮತ್ತು ನಾನು ಕೃತ್ಯ ನಡೆದ ಸಮಯದಲ್ಲಿ ಕೆಂಪು ಬ್ಯಾಟನ್ ಬಳಕೆ ಮಾಡಿರುತ್ತೇವೆ.

7. ಶಬ್ದ ಮಾಡಿಕೊಂಡು ಬರುತ್ತಿದ್ದ ವಾಹನವನ್ನು ನಿಲ್ಲಿಸಲು 50 ಮೀಟರ ದೂರದಿಂದಲೆ ನಾವು ಸನ್ನೆ ಮಾಡುತ್ತೇವೆ. ಸೈಲನ್ಸೆರ್ ಸದ್ದು ಮಾಡಿಕೊಂಡು ಬರುತ್ತಿದ್ದ ಬೈಕ್ ಮತ್ತು ನಾವು ನಿಂತಿದ್ದ ಸ್ಥಳಕ್ಕೂ ಸುಮಾರು 50 ಮೀಟರ ಅಂತರ ಇದ್ದು ನಮ್ಮ ಮದ್ಯೆ ಎರಡು ಮೂರು ವಾಹನಗಳು ಇದ್ದವು . ಮದ್ಯದಲ್ಲಿ ಬರುತ್ತಿದ್ದ ವಾಹನಗಳನ್ನು ನಾವು ನಿಲ್ಲಸಿದ್ದು ನಂತರ ಅವರನ್ನು ಕಳುಹಿಸಿರುತ್ತೇವೆ. ಶಬ್ದ ಮಾಡಿಕೊಂಡು ಬರುತ್ತಿದ್ದ ವಾಹನ ಬೇರೆ ಯಾವುದೆ ವಾಹನಕ್ಕೂ ಡಿಕ್ಕಿ ಪಡಿಸಿರುವುದಿಲ್ಲ. ಕೃತ್ಯ ಸ್ಥಳದಲ್ಲಿ ಎರಡು ಬ್ಯಾರಿಗೇಟ್ ಕಡ್ಡಾಯವಾಗಿ ಇರುತ್ತದೆ . ನಮ್ಮ ಸಿಬ್ಬಂದಿಗೆ ಡಿಕ್ಕಿ ಪಡಿಸಿದ್ದಾಗಿನಿಂದ ಹಾಗು ಅವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋದ ಸಂದರ್ಭದಲ್ಲಿ ಯಾವುದೆ ಫೋಟೋ ಮತ್ತು ವಿಡಿಯೋವನ್ನು ಮಾಡಿರುವುದಿಲ್ಲ. ನನ್ನ ಜೊತೆ ಬಂದ 6 ಜನ ಸಿಬ್ಬಂದಿಗಳು ರಿಫ್ಲೆಕ್ಟಿವ್ ಜ್ಯಾಕೇಟ್ ಬಳಕೆ ಮಾಡಿರುವ ಬಗ್ಗೆ ನನಗೆ ನೆನಪಿಲ್ಲ. ನಾನು ಯಾವುದೆ ರಿಫ್ಲೆಕ್ಟಿವ್ ಜ್ಯಾಕೇಟ್ ಬಳಕೆ ಮಾಡಿರುವುದಿಲ್ಲ.

8. ಸಂಜೆ 6.00 ಗಂಟೆ ಸಮಯದ ನಂತರ ಡ್ರಿಂಕ್ ಆ್ಯಂಡ್ ಡ್ರೈವ್ ಪ್ರಕರಣದ ಬಗ್ಗೆ ಪರಿಶೀಲನೆ ಮಾಡಬೇಕಾದರೆ ರಿಫ್ಲೆಕ್ಟಿವ್ ಜ್ಯಾಕೇಟ್ ನ್ನು ಕಡ್ಡಾಯವಾಗಿ ನಾವು ಬಳಕೆ

ಮಾಡಬೇಕು ಎಂದರೆ ಸರಿ . ರಿಫ್ಲಕ್ಟಿವ್ ಜ್ಯಾಕೇಟ್ ನ್ನು ವಾಹನಗಳಿಗೆ ಸನ್ನೆ ನೀಡಬೇಕೆಂದೆ ಹಾಕುವುದು ಎಂದರೆ ಸರಿ . ರಿಫ್ಲಕ್ಟಿವ್ ಜ್ಯಾಕೇಟ್ ಇಲ್ಲ ಎಂದರೆ ಒಬ್ಬ ವ್ಯಕ್ತಿ ಕತ್ತಲೆಯಲ್ಲಿ ನಿಂತರೆ ಕಾಣಿಸುವುದಿಲ್ಲ ಎಂದರೆ ಸರಿಯಲ್ಲ. ಸಂಜೆ 6.00 ಗಂಟೆಯ ಮೇಲೆ ಯಾವುದೆ ವಾಹನವನ್ನು ಪರಿಶೀಲನೆ ಮಾಡಲು ನಿಂತಿದ್ದಲ್ಲಿ ರಿಫ್ಲಕ್ಟಿವ್ ಜ್ಯಾಕೇಟ್ , ಬ್ಯಾಟನ್ ಮತ್ತು ಹಿಡನ್ ಕ್ಯಾಮೇರಾ ಇರಲೇ ಬೇಕು ಎಂದರೆ ಸರಿ . ನಿಪಿ 1 ರಲ್ಲಿ 3 ವಸ್ತುಗಳನ್ನು ಬಳಕೆ ಮಾಡಿರುವ ಬಗ್ಗೆ ಇರುವುದಿಲ್ಲ ಎಂದರೆ ಸರಿ . ಈ ರೀತಿ ಯಾವುದೆ ಘಟನಾ ಆದ ಸಂದರ್ಭದಲ್ಲಿ ವಿಡಿಯೊ ಚಿತ್ರೀಕರಣ ಮತ್ತ ಫೋಟೋ ತೆಗೆಯುತ್ತೇವೆ ಎಂದರೆ ಸಾಕ್ಷಿಯು ಸಮಯ ಇದ್ದಲ್ಲಿ ತೆಗೆಯುತ್ತೇವೆ ಎಂದು ನುಡಿದರು.

9. ಕುಶಾಲನಗರ ರಸ್ತೆಯಿಂದ ಅಳವಡಿಸಿರುವ ಬ್ಯಾರಿಗೇಟ್ ದಾಟಿ 5 ಅಡಿ ದೂರದಲ್ಲಿ ಈ ಅಪಘಾತವಾಗಿರುತ್ತದೆ . ಸದರಿ ಅಪಘಾತದಿಂದ ನಮ್ಮ ಸಿಬ್ಬಂದಿಯ ಮುಖಕ್ಕೆ ಹಾಗೂ ತೊಡೆಯ ಭಾಗದಲ್ಲಿ ಗಾಯವಾಗಿರುತ್ತದೆ. ಯಾವ ಮುಖದ ಭಾಗಕ್ಕೆ ಮತ್ತು ಯಾವ ತೊಡೆಯ ಭಾಗಕ್ಕೆ ಗಾಯವಾಗಿತ್ತು ಎಂದು ಈಗ ನನಗೆ ನೆನಪಿಲ್ಲ. ಶಬ್ದ ಮಾಡಿಕೊಂಡು ಬಂದ ವ್ಯಕ್ತಿಗೆ ಯಾವ ಭಾಗಕ್ಕೆ ಗಾಯವಾಗಿತ್ತು ಎಂದು ನನಗೆ ಗೊತ್ತಿಲ್ಲ. ಸಿಬ್ಬಂದಿಯ ಬಟ್ಟೆಗೆ ರಕ್ತ ಕಲೆ ಆಗಿರುವ ಬಗ್ಗೆ ನಾನು ನೋಡಿರುವುದಿಲ್ಲ ಸಾಕ್ಷಿಯು ಮುಂದುವರೆದು ಕತ್ತಲೆಯಾಗಿರುವ ಕಾರಣ ಆ ವಿಚಾರದ ಬಗ್ಗೆ ನಾನು ಗಮನ ಹರಿಸಿರುವುದಿಲ್ಲ ಎಂದು ನುಡಿದರು. ಸಿಬ್ಬಂದಿಯ ಬಟ್ಟೆ ಹರಿದ ಬಗ್ಗೆ ನಾನು ಗಮನಿಸಿರುವುದಿಲ್ಲ. ಆ ರೀತಿ ಯಾವುದೆ ಘಟನೆ ನಡೆದಿರುವುದಿಲ್ಲ ಎಂದರೆ ಸರಿಯಲ್ಲ.

10. ಬೈಕ್ ಚಾಲನೆ ಮಾಡಿಕೊಂಡ ಬಂದ ವ್ಯಕ್ತಿಯ ಮೇಲೆ ನಾವುಗಳು ಹಲ್ಲೆ ಮಾಡಿದ್ದು ಅದರಿಂದ ತಪ್ಪಿಸಿಕೊಳ್ಳಲು ಆರೋಪಿಯ ವಿರುದ್ಧ ಸುಳ್ಳು ದೂರನ್ನು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. 1 ನೆ ಆರೋಪಿಯು ಹಲ್ಲೆಗೆ ಒಳಗಾದ ರುಜ್ವಾನ್ ಎಂಬ ವ್ಯಕ್ತಿಯ ತಮ್ಮ ಎಂದರೆ ನನಗೆ ಗೊತ್ತಿಲ್ಲ. ರುಜ್ವಾನ್ ಎನ್ನುವವರು ಹಲವಾರು ಬಾರಿ ಮೇಲೆ ಹೇಳಿದ ರೀತಿ ವಸ್ತುಗಳನ್ನು ಬಳಕೆ ಮಾಡದೆ ವಾಹನವನ್ನು ಪರಿಶೀಲನೆ ಮಾಡಿದರೆ ತೊಂದರೆ ಆಗುತ್ತದೆ ಎಂದು ನಮ್ಮನ್ನು ಪ್ರಶ್ನೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆದಕಾರಣ ಹಲ್ಲೆ ಸಂಬಂಧ ರುಜ್ವಾನ್ ರವರು ನಮ್ಮ ಠಾಣೆಯಲ್ಲಿ ದೂರನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಹಲ್ಲೆಗೆ ಒಳಗಾಗಿ ರುಜ್ವಾನ್ ಎಂಬುವವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ರುಜ್ವಾನ್ ಚಿಕಿತ್ಸೆ ಗೆ ಕರೆದುಕೊಂಡು ಬಂದಾಗ 5-6 ಸಾರ್ವಜನಿಕರು ಆಸ್ಪತ್ರೆಯಲ್ಲಿ ಇದ್ದರು.

11. ಆರೋಪಿಗಳು ನನಗೆ ಬೈಯ್ಯುವ ಸಮಯದಲ್ಲಿ ನಾನು ವೈದ್ಯಾದಿಕಾರಿಗಳ ಕೊಠಡಿಯಲ್ಲಿ ಕುಳಿತಿದ್ದೆ . ಸದರಿ ಕೊಠಡಿಯಲ್ಲಿ ರುಜ್ವಾನ್ ಮತ್ತು ಇತರೆ ಇಬ್ಬರು ಸಿಬ್ಬಂದಿಗಳಾದ ಹೊಸಮನಿ ಮತ್ತು ಇಮ್ರಾನ್ ರವರು ಇದ್ದರು. ಸದರಿ ಮೂರು ಜನ ಹೊರತುಪಡಿಸಿ ಬೇರೆ ಯಾರು ಕೊಠಡಿಯಲ್ಲಿ ಇರುವುದಿಲ್ಲ. ಆರೋಪಿಗಳು ಕೊಠಡಿಯ ಬಾಗಿಲಿನಲ್ಲಿ ನಿಂತಿದ್ದರು. ಕೊಠಡಿಯ ಬಾಗಿಲಿನ ಬಳಿ ಸುಮಾರು 10 ಜನ ಸಾರ್ವಜನಿಕರು ಇದ್ದರು. ಆರೋಪಿಗಳನ್ನು ಹೊರತುಪಡಿಸಿ ಇನ್ನು 10 ಜನ ಸಾರ್ವಜನಿಕರು ಇದ್ದ ಬಗ್ಗೆ ನನ್ನ ದೂರಿನಲ್ಲಿ ತಿಳಿಸಿರುವುದಿಲ್ಲ. ರುಜ್ವಾನ್ ರವರಿಗೆ ಚಿಕಿತ್ಸೆ ನೀಡುತ್ತಿದ್ದ ವೈದ್ಯರ ಹೆಸರು ಶಿವಕುಮಾರ . ಆರೋಪಿಗಳು ನಮಗೆ ಬೈಯುತ್ತಿದ್ದ ಸ್ಥಳದಲ್ಲಿ

ಸಿಸಿಟಿವಿ ಕ್ಯಾಮೆರಾ ಇರುತ್ತದೆ . ಒಂದು ವೇಳೆ ಆರೋಪಿಗಳು ಬೈಯದಿದ್ದೆ ಆದಲ್ಲಿ ಸಿಸಿಟಿವಿ ಕ್ಯಾಮೇರಾದಲ್ಲಿ ರೆಕಾರ್ಡ್ ಆಗಿರುತ್ತದೆ ಎಂದರೆ ಸರಿ .

12. 2 ನೇ ಆರೋಪಿಯು ಬೋಳಿ ಮಗನೆ ಎಂದು ಬೈದಿರುತ್ತಾರೆ.1 ನೇ ಆರೋಪಿಯು ಈ ರೀತಿ ಕೇಸು ದಾಖಲು ಮಾಡಲು ಯಾರು ನಿಮಗೆ ಆದೇಶ ಮಾಡಿದ್ದು ಎಂದು ಹೇಳಿ ನಮ್ಮ ಕರ್ತವ್ಯಕ್ಕೆ ಅಡ್ಡಿ ಪಡಿಸಿರುತ್ತಾರೆ. ಈ ಮೇಲೆ ಹೇಳಿದ ರೀತಿ ನಾನು ನನ್ನ ದೂರಿನಲ್ಲಿ ತಿಳಿಸಿದ್ದೀನಾ ಎಂದರೆ ಸಾಕ್ಷಿಯು ಯಾವ ಯಾವ ಆರೋಪಿ ಏನು ಹೇಳಿದ್ದರು ಎಂದು ನಿಖರವಾಗಿ ಬರೆದಿರುವುದಿಲ್ಲ ಎಂದು ನುಡಿದರು. ಈ ಮೇಲೆ ಹೇಳಿದ ರೀತಿ ನಿಖರವಾಗಿ ದೂರಿನಲ್ಲಿ ಬರೆಯುವುದಕ್ಕೆ ತೊಂದರೆ ಇತ್ತಾ ಎಂದರೆ ಸಾಕ್ಷಿಯು ಅವಶ್ಯಕತೆ ಇರುವುದಿಲ್ಲ ಎಂದು ನುಡಿದರು. ತನಿಖೆ ಮಾಡುವ ಸಮಯದಲ್ಲಿ ಒಂದಕ್ಕಿಂತ ಹೆಚ್ಚಿನ ಆರೋಪಿಗಳು ಇದ್ದಲ್ಲಿ ಪ್ರತಿ ಆರೋಪಿಯು ಏನು ಏನು ಹೇಳಿದ್ದರು ಎಂದು ಹೇಳಿಕೆ ರೂಪದಲ್ಲಿ ಪಡೆಯುತ್ತೇವೆ ಎಂದರೆ ಸರಿ . ಯಾವ ಯಾವ ಆರೋಪಿಗಳು ಏನೇನು ಹೇಳಿದರು ಎಂದು ತಿಳಿಸುವ ಸಾಮರ್ಥ್ಯ ಇರುತ್ತದೆ ಎಂದರೆ ಸರಿ .

13. ಆರೋಪಿಗಳು ನಾನು ಮೇಲೆ ಹೇಳಿದ ರೀತಿಯಲ್ಲಿ ಬೈದರು ಎಂದು ಯಾರು ಹೇಳಿದರು ಎಂದರೆ ಸಾಕ್ಷಿಯು ನನಗೆ ಬೈದ ಕಾರಣ ನಾನೆ ಕೇಳಿಸಿಕೊಂಡಿರುತ್ತೇನೆ ಎಂದು ನುಡಿದರು. ಆ ಸಮಯದಲ್ಲಿ ನನಗೆ ಆರೋಪಿಗಳ ಪರಿಚಯ ಇರುವುದಿಲ್ಲ. ಘಟನೆಯ ಸಂದರ್ಭದಲ್ಲಿ ವೈದ್ಯರ ಕೊಠಡಿಯಲ್ಲಿ ಬೇರೆ ಆಸ್ಪತ್ರೆಯ ಸಿಬ್ಬಂದಿಗಳು ಇರುವುದು ನನಗೆ

ನೆನಪಿಲ್ಲ. ನಮ್ಮ ಸಿಬ್ಬಂದಿಯಾದ ಶಶಿಕುಮಾರರವರು ಆಸ್ಪತ್ರೆಯ ಬೇರೆ ಕೊಠಡಿಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ನಮ್ಮ ಸಿಬ್ಬಂದಿಯಾದ ಸುಮಂತ ಮತ್ತು ಸುನೀಲ್ ರವರು ಶಶಿಕುಮಾರವರನ್ನು ಚಿಕಿತ್ಸೆಗೆ ಕರೆದುಕೊಂಡು ಹೋಗಿರುತ್ತಾರೆ. ನಾನು ಚಿಕಿತ್ಸೆ ಕೊಡುಸುತ್ತಿದ್ದ ರುಜ್ವಾನ್ ರವರಿಗೆ ಯಾವ ಭಾಗಕ್ಕೆ ಏಟು ಆಗಿತ್ತು ಎಂದರೆ ಸಾಕ್ಷಿಯು ತಲೆ ಮತ್ತು ಇತರೆ ಭಾಗಕ್ಕೆ ಏಟು ಆಗಿತ್ತು ಎಂದು ನುಡಿದರು. ಸಾಕ್ಷಿಯು ಮುಂದುವರೆದು ಇತರೆ ಯಾವ ಭಾಗಗಳಿಗೆ ಪೆಟ್ಟಾಗಿತ್ತು ಎಂದು ನನಗೆ ನಿಖರವಾಗಿ ನೆನಪಿಲ್ಲ ಎಂದು ನುಡಿದರು. ಚಿಕಿತ್ಸೆ ಪಡೆಯುತ್ತಿದ್ದ ರುಜ್ವಾನ್ ರವರಿಗೆ ಬಟ್ಟೆ ಹರಿದಿರುವ ಮತ್ತು ರಕ್ತ ಕಲೆ ಆಗಿರುವ ಬಗ್ಗೆ ನನಗೆ ನೆನಪಿಲ್ಲ. ರುಜ್ವಾನ್ ರವರಿಗೆ ಅಪಘಾತದಿಂದ ನಾವು ಯಾವುದೆ ಚಿಕಿತ್ಸೆ ಕೊಡಿಸಿಲ್ಲದ ಕಾರಣ ಅವರಿಗೆ ಎಲ್ಲಿ ಎಲ್ಲಿ ಪೆಟ್ಟಾಗಿತ್ತು ಎಂದು ನಿಖರವಾಗಿ ತಿಳಿಸಲು ಸಾಧ್ಯವಾಗುತ್ತಿಲ್ಲ ಎಂದರೆ ಸರಿಯಲ್ಲ.

14. ನಾನು ರುಜ್ವಾನ್ ರವರಿಗೆ ಚಿಕಿತ್ಸೆ ಕೊಡಿಸುತ್ತಿದ್ದ ಸಮಯಕ್ಕೆ ಕುಶಾಲನಗರ ಟೌನ್ ಪೋಲಿಸ್ ಠಾಣೆಯ ಸಿಬ್ಬಂದಿಗಳು ಯಾರು ಇರಲಿಲ್ಲ. ಸಾಕ್ಷಿಯು ಮುಂದುವರೆದು ನಮ್ಮ ಸಿಬ್ಬಂದಿಯಾದ ಶಶಿಕುಮಾರವರನ್ನು ನೋಡಲು ಎಲ್ಲಾರು ಅವರ ಕೊಠಡಿಗೆ ಹೋಗಿದ್ದರು ಎಂದು ನುಡಿದರು. ಆಸ್ಪತ್ರೆಯಲ್ಲಿ ನಡೆದ ಗಲಾಟೆಯನ್ನು ಯಾರು ಬಿಡಿಸಲು ಬಂದಿರುವುದಿಲ್ಲ. ಆ ಸಂದರ್ಭದಲ್ಲಿ ವೈದ್ಯಾದಿಕಾರಿಗಳು ಪೋಲಿಸ್ ಠಾಣೆಗೆ ಎಂ ಎಲ್ ಸಿ ಬಗ್ಗೆ ಮಾಹಿತಿ ನೀಡಿರುತ್ತಾರೆ. ಈ ರೀತಿ ಗಲಾಟೆಯಾದ ಬಗ್ಗೆ ವೈದ್ಯಾದಿಕಾರಿಗಳು ಠಾಣೆಗೆ ತಿಳಿಸಿರುವುದಿಲ್ಲ. ಆರೋಪಿಗಳು ಯಾವುದೆ ರೀತಿ ಬೈದಿರುವುದಿಲ್ಲ ಹಾಗೂ ಕರ್ತವ್ಯಕ್ಕೆ ಅಡ್ಡಿ ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ರುಜ್ವಾನ್ ರವರ ಮೇಲೆ ಹಲ್ಲೆ

ಮಾಡಿದ ಕಾರಣ ಸಾರ್ವಜನಿಕರು ನಮ್ಮನ್ನು ಪ್ರಶ್ನೆ ಮಾಡಿದ್ದು ಅವರು ನಮಗೆ ದೂರು ಕೊಡುತ್ತಾರೆ ಎಂದು ತಿಳಿದು ಆರೋಪಿಗಳ ವಿರುದ್ಧ ನಾವು ದೂರು ನೀಡಿರುತ್ತೇವೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ರುಜ್ವಾನ್ ರವರು ನಮ್ಮ ಮೇಲೆ ಯಾವುದೆ ಹಲ್ಲೆ ಮಾಡಿರುವುದಿಲ್ಲ. ಆರೋಪಿಗಳ ಮೇಲೆ ಸುಳ್ಳು ದೂರನ್ನು ಕೊಟ್ಟು ಒತ್ತಡ ಹೇರಿ ಸುಳ್ಳು ಪ್ರಕರಣ ದಾಖಲು ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಿಪಿ1 ರಲ್ಲಿ ಬರೆದಿರುವ ವಿಚಾರ ಸುಳ್ಳಾಗಿದ್ದು ಆ ರೀತಿ ಯಾವುದೆ ಘಟನೆ ನಡೆದಿರುವುದಿಲ್ಲ ಎಂದರೆ ಸರಿಯಲ್ಲ. ಕೃತ್ಯ ಸ್ಥಳಕ್ಕೆ ಹಾಜರಾಗಲು ತನಿಖಾಧಿಕಾರಿಗಳು ನನಗೆ ನೋಟಿಸು ಕೊಟ್ಟ ಬಗ್ಗೆ ನನಗೆ ನೆನಪಿರುವುದಿಲ್ಲ. ನಾನು ಘಟನಾ ಸ್ಥಳಕ್ಕೆ ಹೋದ ಮೇಲೆ ಪಂಚರುಗಳು ಘಟನಾ ಸ್ಥಳಕ್ಕೆ ಬಂದಿರುತ್ತಾರೆ.

15. ಮಹಜರ ವೇಳೆಯಲ್ಲಿ ಆಸ್ಪತ್ರೆಯ ಸಿಬ್ಬಂದಿಗಳು ಹಾಗೂ ಸಾರ್ವಜನಿಕರು ಘಟನಾ ಸ್ಥಳದಲ್ಲಿ ಇರುತ್ತಾರೆ. ಘಟನಾ ಸ್ಥಳಕ್ಕೂ ಹಾಗೂ ಆಸ್ಪತ್ರೆಯ ಹೊರಭಾಗದ ಗೇಟಿಗೂ ಸುಮಾರು 20-30 ಅಡಿ ಅಂತರ ಇರುತ್ತದೆ. ಸದರಿ ಮಹಜರ ಕ್ರಮವನ್ನು ಆಸ್ಪತ್ರೆಯ ವೈದ್ಯಾದಿಕಾರಿಯ ಕೊಠಡಿಯ ಹೊರಗಡೆ ಬರೆದಿರುತ್ತಾರೆ. ಘಟನೆಗೆ ಸಂಂಭಂದಿಸಿದಂತೆ ಆಸ್ಪತ್ರೆಯ ಹೊರಭಾಗದಲ್ಲಿ ಮಹಜರ ಮಾಡುವ ಮತ್ತು ಫೋಟೋ ತೆಗೆಯುವ ಪ್ರಮೇಯ ಇರುವುದಿಲ್ಲ ಎಂದರೆ ಸರಿಯಲ್ಲ. ಆಸ್ಪತ್ರೆಯ ಹೊರಭಾಗದಲ್ಲಿ ಯಾವುದೆ ರೀತಿ ಘಟನೆ ನಡೆದಿರುವುದಿಲ್ಲ ಎಂದರೆ ಸರಿ .ನಿಪಿ 2 ನ್ನು ನಮ್ಮ ಪೋಲಿಸ್ ಸಿಬ್ಬಂದಿಯಾದ ಚಂಗಪ್ಪ ರವರು ಬರೆದಿರುತ್ತಾರೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಚಂದ್ರಶೇಖರ್ ರವರು

ಯಾವುದೆ ಮಹಜರ ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ಮಹಜರ ಮಾಡಿರುತ್ತಾರೆ ಆದರೆ ಮಹಜರನ್ನು ಅವರು ಬರೆದಿರುವುದಿಲ್ಲ ಎಂದು ನುಡಿದರು.

16. ನಿಪಿ 2 ರಲ್ಲಿ ವೈದ್ಯಾದಿಕಾರಿಗಳ ಕೊಠಡಿಯ ಹಾಗೂ ಪ್ಯಾಸೇಜ್ ನ ಅಳತೆ ನಮೂದು ಇರುತ್ತದೆ . ಘಟನೆ ಸ್ಥಳದಲ್ಲಿ ಯಾವುದೆ ಮಹಜರ ಮಾಡಿರುವುದಿಲ್ಲ ಅದನ್ನು ಠಾಣೆಯಲ್ಲಿ ಕುಳಿತು ಮಾಡಿದ್ದು ಅದಕ್ಕೆ ಸಹಿ ಹಾಕಿ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಾನು ಕೊಟ್ಟಿರುವ ಸುಳ್ಳು ದೂರಿಗೆ ಪೂರಕವಾಗಿ ಮಹಜರನ್ನು ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ಈ ಘಟನೆಗೆ ಸಂಬಂಧಿಸಿದಂತೆ ನಾನು ಮುಂದುವರೆದ ಹೇಳಿಕೆಯನ್ನು ಕೊಟ್ಟಿರುತ್ತೇನೆ. ದಿಃ 01.09.2023 ರಂದು ಸದರಿ ಮುಂದುವರೆದ ಹೇಳಿಕೆಯನ್ನು ಕೊಟ್ಟಿರುತ್ತೇನೆ. ಆ ಸಂದರ್ಭದಲ್ಲಿ ಆರೋಪಿಗಳು ಬಂದಿರುವುದಿಲ್ಲ. ಆ ನಂತರ ದಿನಗಳಲ್ಲಿ ತನಿಖಾದಿಕಾರಿಗಳು ಆರೋಪಿಯ ಗುರುತುವಿಕೆಯ ಬಗ್ಗೆ ನನ್ನನ್ನು ಕರೆಸಿ ವಿಚಾರಣೆ ಮಾಡಿರುವುದಿಲ್ಲ ಹಾಗೂ ಯಾವುದೆ ಹೇಳಿಕೆಯನ್ನು ಪಡೆದಿರುವುದಿಲ್ಲ . ನಾನು ಹೇಳಿದ ರೀತಿ ಯಾವುದೆ ಘಟನೆ ಆಗದ ಕಾರಣ ಆರೋಪಿಗಳನ್ನು ಗುರುತಿಸಲು ನನ್ನನ್ನು ಕರೆಸಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಠಾಣಾ ದಿನಚರಿ ಪುಸ್ತಕದಲ್ಲಿ ಮಹಜರಗೆ ಕರೆದಿರುವ ಬಗ್ಗೆ ಹಾಗೂ ಹೇಳಿಕೆಯನ್ನು ಪಡೆದಿರುವ ಬಗ್ಗೆ ನಮೂದು ಆಗಿದ್ದ ಬಗ್ಗೆ ನನಗೆ ನೆನಪಿರುವುದಿಲ್ಲ.

17. ಬೇರೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮಹಜರಗೆ ಹೋಗಿದ್ದಲ್ಲಿ ಠಾಣಾ ದಿನಚರಿಯಲ್ಲಿ ನಮೂದು ಮಾಡುತ್ತೀರೋ ಇಲ್ಲವೋ ಎಂದರೆ ಸಾಕ್ಷಿಯು ಎಲ್ಲಾ ಪ್ರಕರಣದಲ್ಲಿ ಮಾಡುವುದಿಲ್ಲ ಎಂದು ನುಡಿದರು. ಆ ರೀತಿ ಬೇರೆ ಪ್ರಕರಣದಲ್ಲಿ ಹೋದರೆ ಠಾಣಾ

ದಿನಚರಿಯಲ್ಲಿ ನಮೂದು ಮಾಡಬೇಕಾಗುತ್ತದೆ ಎಂದರೆ ಸರಿಯಲ್ಲ. ನಮ್ಮ ಕರ್ತವ್ಯ ನಿಯೋಜನೆಗೊಂಡಿಂದ್ದನ್ನು ಬಿಟ್ಟು ಬೇರೆ ಕೆಲಸಕ್ಕೆ ಹೋದಲ್ಲಿ ಠಾಣಾ ದಿನಚರಿಯಲ್ಲಿ ನಮೂದು ಮಾಡಬೇಕು ಎಂದರೆ ಸರಿ . ಈ ರೀತಿ ಮಹಜರಗೆ ನಾನು ಹೋದಾಗ ಠಾಣಾ ದಿನಚರಿಯಲ್ಲಿ ನಮೂದು ಮಾಡಿದ ಬಗ್ಗೆ ನನಗೆ ನೆನಪಿಲ್ಲ. ಸದರಿ ಪ್ರಕರಣಕ್ಕೂ ಹಾಗೂ ಆರೋಪಿಗಳಿಗೂ ಯಾವುದೆ ಸಂಭಂದ ಇರುವುದಿಲ್ಲ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ರುಜ್ವಾನ್ ರವರಿಗೆ ಹಲ್ಲೆ ಮಾಡಿದ್ದು ಅವರ ದೂರನ್ನು ತೆಗೆದುಕೊಳ್ಳಲು ನಾನು ಬಿಟ್ಟಿರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓದಿ ಹೇಳಿ ಕೇಳಿ ಸರಿ ಇದೆ.

ಸಹಿ/–

ಪ್ರ ದ ನ್ಯಾದಂ, ಕುಶಾಲನಗರ